ದಿನಾಂಕ 21.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ. S.Y.G. ವಕೀಲರಿಂದ:**

ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ ವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸರ್ವೆ ನಂ. 166 ಮೂಲತಃ ವೆಂಕಟಯ್ಯ ರವರ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ. 166 ರಲ್ಲಿ 5 ಪೋಡಿ ಯಾಗಿದೆ ಎಂದರೆ ಸರಿಯಲ್ಲ , ಎರಡೇ ಪೋಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 166 ರ ಸ್ವತ್ತು ಸಾತನೂರಿನಲ್ಲಿದೆ ಎಂದರೆ ಸರಿ .

ವಾದಿ ತಾತ ವೆಂಕಟಯ್ಯ ಎಂದರೆ ಗೊತ್ತಿಲ್ಲ. ವೆಂಕಟಯ್ಯ ರವರ ಮರಣಾನಂತರ ವಾದಿಯ ತಂದೆ ಕಾಳಯ್ಯನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಕಾಳಯ್ಯನ ಮರಣಾನಂತರ ವಾದಿಯ ಹೆಸರಿಗೆ ಖಾತೆ ಬಂದಿರುತ್ತದ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಪೌತಿ ಖಾತೆ ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ಅವರು ಊರಿನಲ್ಲಿ ಇಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ. 166 /2 ನಾಗರಾಜು ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿದಾರರು ದಾಖಲೆ ಕಾನೂನು ಬಾಹಿರವಾಗಿ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 166 /5 ನಾಗರಾಜು ಹೆಸರಿನಲ್ಲಿ ಇದೆ ಎಂದರೆ

ಸಾಕ್ಷಿದಾರರು ದಾಖಲೆ ಕಾನೂನು ಬಾಹಿರವಾಗಿ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 166 /2 ರಲ್ಲಿ 1 ಗುಂಟೆಯ ಉತ್ತರಕ್ಕೆ ನಿಮ್ಮ ಜಾಗ ಎಂದರೆ ಸಾಕ್ಷಿದಾರರು ರಸ್ತೆ ಬರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಜಮೀನು ಯಾವ ದಿಕ್ಕಿನಲ್ಲಿದೆ ಎಂದರೆ ಸಾಕ್ಷಿದಾರರು ವಾದಿಯ ಜಮೀನು ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 166 /2 ಮತ್ತು ಸರ್ವೆ ನಂ. 166 /5 ಎರಡರಲ್ಲೂ ಸಹ ಸರ್ವೆ ಅಧಿಕಾರಿಗಳು ಸ್ಕೆಚ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ಸ್ಕೆಚ್ ಆಧಾರದ ಮೇಲೆ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ , ಪಹಣಿ ಇದೆ ಎಂದರೆ ಸರಿಯಲ್ಲ.

ದಿನಾಂಕ 10.11.2021 ರಂದು 10.30 ಸಮಯದಲ್ಲಿ ನೀವು ವಾದಿಯ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸಾತನೂರು ಠಾಣೆಯಲ್ಲಿ ದೂರನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯ ಆಗಿರುವ ಕಾರಣ ನ್ಯಾಯಾಲಯಕ್ಕೆ ಹೋಗಲು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ನಿಮ್ಮ ಸರ್ವೆ ನಂಬರ್ ಸರ್ವೆ ನಂ. 166 /1 ಆಗಿರುತ್ತದೆ ಎಂದರೆ ಸರಿ . ಸದರಿ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸರ್ವೆ ನಂ. 166 /1 ರಲ್ಲಿ 4 ಗುಂಟೆ ಜಾಗ ಇರುತ್ತದೆ. ಸರ್ವೆ ನಂ. 166 /1 ನಿಮ್ಮದಾಗಿರುತ್ತದೆ , ಸರ್ವೆ ನಂ. 166 /2 ವಾದಿಯ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ , ಸಂಬೇಗೌಡರ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

ನಿಮ್ಮ ತಕರಾರಿನಲ್ಲಿ ಗ್ರಾಮ ಠಾಣೆಗೆ ಸೇರಿದ್ದು ಎಂದು ಹೇಳಿರುವಿರಿ , ಗ್ರಾಮ ಠಾಣೆಗೆ ಸೇರಿದ್ದರ ಸಂಬಂಧ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸರಿ . ಸರ್ವೆ ನಂ. 166 /1 ನಿಮ್ಮ ಹೆಸರಿನಲ್ಲಿ ಬರುತ್ತಿಲ್ಲ ಎಂದರೆ ಸರಿ . ಸರ್ವೆ ನಂ. 166 /2 ಅನ್ನು ಲಪಟಾಯಿಸುವ ಉದ್ದೇಶದಿಂದ ವಾದಿಗಳಿಗೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಬೆಂಗಳೂರಿನಲ್ಲಿ ವಾಸವಾಗಿರುತ್ತೀರಿ ಎಂದರೆ 2010 ರಿಂದ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ವಾಸವಾಗಿರುವ ಕಾರಣ ನಿಮಗೆ ವಾದಿಯ ಜಾಗ ಮತ್ತು ನಿಮ್ಮ ಜಾಗ ಎಂದು ಹೇಳುವ ಜಾಗದ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 166 /1 ಮೂಲತಃ ಮುಸ್ಲಿಂ ಸಮುದಾಯಕ್ಕೆ ಸೇರಿದ್ದು ಎಂದರೆ ಸರಿ, ನಂತರ ಗುರುಸಿದ್ದಯ್ಯ ರವರ ಹೆಸರಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಸರ್ವೆ ನಂ. 166 /2 ರ 1 ಗುಂಟೆ ಗ್ರಾಮ ಠಾಣೆಗೆ ಸೇರಿದ್ದು ಎಂದು ಹೇಳಿರುವಿರಿ , ಆ ರೀತಿ ಗ್ರಾಮ ಠಾಣೆಗೆ ಸೇರಿದ್ದರೆ ವರದಿ ನೀಡುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 166 /1 ಈಗಲೂ ಸಹ ಚಿಕ್ಕ ಬಸವಯ್ಯ , ಬಸವಲಿಂಗಯ್ಯ, ಚಿಕ್ಕೈದಯ್ಯ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ , ಗ್ರಾಮ ಠಾಣೆಗೆ ಸೇರಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 166 /2 ಸಹ ವಾದಿಯ ಹೆಸರಿನಲ್ಲಿ ಖಾತೆ ಬರುತ್ತಿದ್ದು ಗ್ರಾಮ ಠಾಣೆಗೆ ಸೇರಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 166 /5 ಸಹ ವಾದಿಯ ಹೆಸರಿನಲ್ಲಿ ಖಾತೆ , ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ. ಸರ್ವೆ ನಂ. 166 /5 ಕ್ಕೆ ಯಾರು ಸಹ ತೊಂದರೆ ಕೊಡುತ್ತಿಲ್ಲ , ಸರ್ವೆ ನಂ. 166 /1 ರ 1 ಗುಂಟೆಗೆ ನೀವು ಮತ್ತು

ನಿಮ್ಮ ಸಂಬಂಧಿಕರು ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ 1 ಗುಂಟೆ ಮನೆ ಕಟ್ಟುವ ಜಾಗ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನಿಮಗೆ ಗೊತ್ತಿಲ್ಲದಿದ್ದರೂ ಸಹ ಉಳಿದ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇದ್ದರೂ , ನೀವು ಅವರ ಸ್ವಾ ಧೀನಕ್ಕೆ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

ಸರ್ವೆ ನಂ. 166 /1 ರ ಚಕ್ಕುಬಂಧಿ ನನಗೆ ತಿಳಿದಿದೆ , ಪೂರ್ವಕ್ಕೆ ಮದೇಸ್ವಾ ಮಿ , ಪಶ್ಚಿಮ ಮತ್ತು ಉತರಕ್ಕೆ ರಸ್ತೆ , ದಕ್ಷಿಣಕ್ಕೆ ಬೈರವಯ್ಯ ರವರ ಜಮೀನು ಇದೆ. ಸರ್ವೆ ನಂ. 166 /2 ರ ಚಕ್ಕುಬಂಧಿ ಪೂರ್ವಕ್ಕೆ ಮಹದೇವಸ್ವಾಮಿ ಜಮೀನು, ಪಶ್ಚಿಮಕ್ಕೆ ಗುರುಸಿದ್ದಯ್ಯ ಮತ್ತು ಶಿವಲಿಂಗಯ್ಯ , ಉತ್ತರಕ್ಕೆ ನೀವು , ದಕ್ಷಿಣಕ್ಕೆ ಮರಿಸ್ವಾ ಮಿ ಎಂದರೆ ಸರಿಯಲ್ಲ. ಸದರಿ ಚಕ್ಕುಬಂಧಿ ಪ್ರಕಾರ ವಾದಿ 1 ಗುಂಟೆ ಸ್ವತ್ತಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ಗುಂಟೆಯನ್ನು ಲಪಟಾಯಿಸಲು ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ